# ಪೇಟಿಎಂ: ಸಿಬಿಲ್ ಸ್ಕೋರ್

■ ಶಶಿಕುಮಾರ್ ಸಿ.

ಪೇಟಿಎಂ ಆ್ಯಪ್ ಬರೀ ಪೇಮೆಂಟ್ಸ್‌ಗೆ ಸೀಮಿತಗೊಂಡಿಲ್ಲ. ನಾನಾ ರೀತಿಯ ಬಳಕೆಯಲ್ಲಿ ಈ ಆ್ಯಪ್ ಬಳಕೆದಾರರ ನೆರವಿಗೆ ಬರುತ್ತಿದೆ. ಆ ಪೈಕಿ ಆ್ಯಪ್ ತನ್ನ ಬಳಕೆದಾರರ ಸಿಬಿಲ್ ಸ್ಕೋರ್ ಪರೀಶಿಲನೆಗಾಗಿ ಈಚೆಗೆ ಹೊಸ ಫೀಚರ್ ಪರಿಚಯಿಸಿದೆ. ಅದುವೇ 'ಪೇಟಿಎಂ ಸಿಬಿಲ್ ಸ್ಕೋರ್' ಫೀಚರ್.

ಬ್ಯಾಂಕಿನ ವ್ಯವಹಾರವನ್ನು ಬಳಕೆದಾರರು ಸೂಕ್ತವಾದ ರೀತಿಯಲ್ಲಿ ಉತ್ತಮವಾಗಿ ನಿರ್ವಹಿಸಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿಯುವುದೇ ಸಿಬಿಲ್ ಸ್ಕೋರ್. ಸಾರ್ವಜನಿಕರು ತಮ್ಮ ಸಿಬಿಲ್ ಸ್ಕೋರ್ ಪರೀಕ್ಷಿಸಲು ನಿರ್ದಿಷ್ಟ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಕೆಲವೊಮ್ಮೆ ಬ್ಯಾಂಕಿನ ಅಧಿಕಾರಿಗಳೇ ಗ್ರಾಹಕರ ಸಿಬಿಲ್ ಸ್ಕೋರ್ ಪರಿಶೀಲಿಸಿ ಸಾಲ ನೀಡುವುದರ ಬಗ್ಗೆ ನಿರ್ಧರಿಸುತ್ತಾರೆ. ಆಗ ಶುಲ್ಕ ಪಾವತಿಸುವ ಅಗತ್ಯ ಎದುರಾಗದು.

ಪೇಟಿಎಂ ಆ್ಯಪ್‌ನಲ್ಲಿ ತಮ್ಮ ಸಿಬಿಲ್ ಅಂಕಗಳನ್ನು ಪರೀಕ್ಷಿಸಿಕೊಳ್ಳಬಹುದು ಎಂಬ ಬಗ್ಗೆ ಹೆಚ್ಚಿನ ಜನರಿಗೆ ಅಷ್ಟಾಗಿ ತಿಳಿದಿಲ್ಲ. ತಮ್ಮ ಮೊಬೈಲ್ ಮೂಲಕವೇ ಸಿಬಿಲ್ ಸ್ಕೋರ್ ಬಗ್ಗೆ ಅಂದಾಜು ಇಟ್ಟುಕೊಳ್ಳುವುದಕ್ಕೆ ಇದೀಗ ಪೇಟಿಎಂ ಬಳಕೆದಾರರಿಗೆ ನೆರವು ನೀಡುತ್ತದೆ.

ಈ ಆ್ಯಪ್‌ನಲ್ಲಿ ಬಳಕೆದಾರರ ಕ್ರೆಡಿಟ್ ಕಾರ್ಡ್ ಮತ್ತು ಸಾಲದ ಸ್ಟೇಟ್ಮೆಂಟ್ ಕೂಡ ಪಡೆದುಕೊಳ್ಳಬಹುದು. ಒಂದು ನಗರದಲ್ಲಿರುವ, ರಾಜ್ಯದಲ್ಲಿರುವ ಅಥವಾ ದೇಶದಲ್ಲಿರುವ ಇತರರ ಕ್ರೆಡಿಟ್ ಸ್ಕೋರ್‌ನೊಂದಿಗೆ ನಿಮ್ಮ ಸ್ಕೋರ್ ಅನ್ನು ಹೋಲಿಸಿ ನೋಡಿಕೊಳ್ಳುವುದಕ್ಕೂ ಇದು ಅವಕಾಶ ನೀಡುತ್ತದೆ.

ಆ್ಯಪ್‌ನಲ್ಲಿ ಕಲಿಕೆಗೂ ಮಹತ್ವ ನೀಡಲಾಗಿದೆ. ಸಿಬಿಲ್ ಸ್ಕೋರ್ ಅನ್ನು ಹೆಚ್ಚಿಸಿಕೊಳ್ಳಲು ಏನು ಮಾಡಬೇಕು, ಕ್ರೆಡಿಟ್ ರಿಪೋರ್ಟ್ ಅನ್ನು ಉತ್ತಮವಾಗಿಸುವುದು ಹೇಗೆ? ಲೋನ್ ಅಪ್ಲಿಕೇಷನ್‌ಗೆ ಅಗತ್ಯವಿರುವ ಚೆಕ್ ಲಿಸ್ಟ್‌ಗಳು ಮತ್ತು ಸಾಲ ಪಡೆಯುವುದಕ್ಕೆ ಕ್ರೆಡಿಟ್ ಸ್ಕೋರ್ ಎಷ್ಟು ಮುಖ್ಯ ಎಂಬ ಮಾಹಿತಿ ಲಭ್ಯವಾಗಲಿದೆ.







### ಆರ್ಥಿಕ ಶಿಸ್ತಿನ ಕನ್ನಡಿ

ಹೆಚ್ಚಿನವರಿಗೆ ಸಿಬಿಲ್ ಅಥವಾ ಕ್ರೆಡಿಟ್ ಸ್ಕೋರ್ ಬಗ್ಗೆ ತಿಳಿದಿರುವುದೇ ಇಲ್ಲ. ಇದು ಮೂರು ಸಂಖ್ಯೆ ಇರುವ, 300ರಿಂದ 900ರವರೆಗಿನ ಯಾವುದೇ ಅಂಕೆ ಆಗಿರಬಹುದು. ಇದು ಒಬ್ಬ ವ್ಯಕ್ತಿಯ ವೈಯಕ್ತಿಕವಾದ ಆರ್ಥಿಕ ರಿಪೋರ್ಟ್ ಕಾರ್ಡ್ ಆಗಿರುತ್ತದೆ. ಇದು ನಿಮ್ಮ ಕ್ರೆಡಿಟ್ ಹಿಸ್ಟರಿಯನ್ನು ಆಧರಿಸಿರುತ್ತದೆ.

ನೀವು ಬ್ಯಾಂಕ್‌ನಿಂದ ಹಣ ತೆಗೆದದ್ದು, ಹಣ ಹಾಕಿರುವುದು, ಶುಲ್ಕ ಪಾವತಿ ಮಾಡಿರುವುದು, ದಂಡ ಕಟ್ಟಿರುವುದು ಇತ್ಯಾದಿ ಎಲ್ಲವೂ ಸಮಯಕ್ಕೆ ಸರಿಯಾಗಿ ಇದೆಯೇ ಅರ್ಥಾತ್ ನಿಮ್ಮ ಬ್ಯಾಂಕಿಂಗ್ ವ್ಯವಹಾರವನ್ನು, ನಿಮ್ಮ ಜೀವನದ ಹಣದ ಲೆಕ್ಕಾಚಾರವನ್ನು ನೀವೆಷ್ಟು ಶಿಸ್ತಾಗಿ ಇಟ್ಟುಕೊಂಡಿದ್ದೀರಿ ಎಂಬುದನ್ನು ಸಿಬಿಲ್ ಸ್ಕೋರ್ ತಿಳಿಸುತ್ತದೆ. ಸಿಬಿಲ್ ಸ್ಕೋರ್ ಉತ್ತಮವಾಗಿರುವುದು ಬಹಳ ಮುಖ್ಯ. ಉತ್ತಮ ಅಂಕ ಗಳಿಸಿದ್ದರೆ ನಿಮಗೆ ಸಾಲ ಸಿಗುವಿಕೆ ಸೇರಿದಂತೆ ಬ್ಯಾಂಕಿಂಗ್ ವ್ಯವಹಾರವು ಸುಗಮವಾಗಿ ನಡೆಯುವುದಕ್ಕೆ ಇದು ಸಹಾಯ ಮಾಡುತ್ತದೆ. 'ಮುಖ ನೋಡಿ ಸಾಲ ನೀಡುವುದಿಲ್ಲ' ಎಂಬುದು ನಮಗೆ ನೆನಪಿನಲ್ಲಿ ಇರಬೇಕಾದ ವಿಷಯ. ನಮ್ಮ ಹಣದ ವಹಿವಾಟು ಎಷ್ಟು ಶಿಸ್ತುಬದ್ಧವಾಗಿದೆ ಎಂಬುದನ್ನು ಸಿಬಿಲ್ ಅಂಕದ ಮೂಲಕ ಪರೀಕ್ಷಿಸಿ ಸಾಲ ನೀಡಲಾಗುತ್ತದೆ.

### ಸಿಬಿಲ್ ಅಂಕ ನೋಡುವುದು ಹೇಗೆ?

ಸ್ಮಾರ್ಟ್ ಫೋನಿನಲ್ಲಿ ಪೇಟಿಎಂ ಆ್ಯಪ್ ಅನ್ನು ತೆರೆಯಿರಿ ಮತ್ತು ಲಾಗಿನ್ ಆಗಿ. ಹೋಮ್ ಸ್ಕ್ರೀನ್‌ನಲ್ಲಿರುವ 'ಶೋ ಮೋರ್' ಆಯ್ಕೆಯನ್ನು ಕ್ಲಿಕ್ಕಿಸಿ. ಫೀಚರ್ಸ್ ಸೆಕ್ಷನ್‌ಗೆ ಹೋಗಿ ಅಲ್ಲಿ 'ಫ್ರೀ ಕ್ರೆಡಿಟ್ ಸ್ಕೋರ್' ಆಯ್ಕೆಯನ್ನು ಸೆಲೆಕ್ಟ್ ಮಾಡಿ. ನಿಮ್ಮ ಪಾನ್ ಕಾರ್ಡ್ ನಂಬರ್ ಮತ್ತು ಹುಟ್ಟಿದ ದಿನಾಂಕವನ್ನು ನಮೂದಿಸಿ. ಮೊದಲ ಬಾರಿಯ ಬಳಕೆದಾರರು ಓಟಿಪಿ ನಮೂದಿಸಿ ಖಾತರಿ ಮಾಡಿಕೊಳ್ಳಬೇಕು.

ಮೇಲಿನ ಹಂತಗಳು ಮುಗಿದ ನಂತರ ಕ್ರೆಡಿಟ್ ಸ್ಕೋರ್ ಅಥವಾ ಸಿಬಿಲ್ ಸ್ಕೋರ್ ಪರೀಕ್ಷೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಹಂತದಲ್ಲಿ ನಿಮ್ಮ ಎಲ್ಲಾ ಸಾಲಗಳ, ಕ್ರೆಡಿಟ್ ಕಾರ್ಡ್ ಅಕೌಂಟ್‌ಗೆ ಪ್ರವೇಶ ಪಡೆದು, ಸಿಬಿಲ್ ಕ್ರೆಡಿಟ್ ರಿಪೋರ್ಟ್ ಜೊತೆಗೆ ಕ್ರೆಡಿಟ್ ಎಜುಕೇಷನ್ ವಿಭಾಗವನ್ನು ಕೂಡ ಆಯ್ಕೆ ಮಾಡಿಕೊಂಡು ಪರಿಶೀಲಿಸಬಹುದು.

ಪೇಟಿಎಂನಲ್ಲಿ ಸಿಬಿಲ್ ಸ್ಕೋರ್ ಪರೀಕ್ಷಿಸುವುದಕ್ಕೆ ಉಚಿತ ಅವಕಾಶವಿರುವುದರಿಂದ ನಿಮ್ಮ ಬ್ಯಾಂಕಿಂಗ್ ವ್ಯವಹಾರದಲ್ಲಿ ಬದ್ಧತೆ ಕಾಪಾಡಿಕೊಂಡು ಸ್ಕೋರ್ ಅನ್ನು ಅತ್ಯುತ್ತಮವಾಗಿರುವಂತೆ ನೋಡಿಕೊಳ್ಳಬಹುದು. ■

ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.